9.	1976-77	60,600-00
10.	1977-78	46,335-33
11.	1978-79	3,55,145-59
12.	1979-80	1,90,911-76
		... .
	ಒಟ್ಟು	12,28,144-94

ಅಧ್ಯಕ್ಷರು.--ಉತ್ತರಗಳು ಬಂದಿಲ್ಲವಾದ ಕಾರಣ ಪ್ರಶ್ನೆಯನ್ನು ಮುಂದೂಡಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.--ಸೊರಬಾ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ 1968-69 ರಲ್ಲಿ 9,500-00 ರೂಪಾಯಿ ಹಣ ದುರುಪಯೋಗವಾಗಿದ್ದು 1978-79 ರ ವರೆಗೆ 3,55,145-59 ರೂಪಾಯಿಗಳು ಹಾಗೂ 1979-80ರ ವರೆಗೆ ಒಟ್ಟು 12 ಲಕ್ಷ 28 ಸಾವಿರ ರೂಪಾಯಿಗಳು ಸತತವಾಗಿ ದರೊಡೆಯಾಗಿರುತ್ತದೆ. ಇಷ್ಟಾದರೂ ಏನೂ ಕಾರ್ಯಕ್ರಮ ಯಾರ ಮೇಲೂ ತೆಗೆದುಕೊಂಡಿಲ್ಲವೆಂದು ಹೇಳುವುದಾದರೆ ಇನ್ನು ಎಷ್ಟು ಲಕ್ಷ ರೂಪಾಯಿಗಳನ್ನು ಹೊಡೆದಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲು ತೀರ್ಮಾನ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ --1978-79 ರಲ್ಲಿ ಈ ಒಂದು ದುರುಪಯೋಗವಾಗಿರತ್ಕಂಥದ್ದು ಸರ್ಕಾರದ ಗಮನಕ್ಕೆ ಬಂದ ತಕ್ಷಣವೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ.--ಅಧಿಕಾರಿವರ್ಗದವರು ಹಾಗೂ ಅಧ್ಯಕ್ಷರು ಸದಸ್ಯರಿಗೆ ಗೊತ್ತಿಲ್ಲದೆ ಪೊರ್ಜರಿ ರೆಕಾರ್ಡ್‌ಗಳನ್ನು ಸೃಷ್ಟಿಮಾಡಿ ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡಿರುತ್ತಾರೆ. ಅಧ್ಯಕ್ಷರು ತಮ್ಮ ಹೆಂಡತಿಯ ಹೆಸರಿನಲ್ಲಿ ಟ್ರಾಕ್ಟರನ್ನು ಕೊಂಡುಕೊಂಡಿರುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಇದು ಒಂದು ಬಹಳ ದೊಡ್ಡ ಕತೆ. 1978-79 ರಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷನಾಗಿದ್ದಾಗ ಈ ವಿಷಯ ಪತ್ರಿಕೆಗಳಲ್ಲಿ ಬಂದಿತ್ತು. ವಿಷಯ ತಿಳಿದ ತಕ್ಷಣ ಆ ಬ್ಯಾಂಕಿನಲ್ಲಿದ್ದ ಸೆಕ್ರೆಟರಿಯನ್ನು ಸಸ್‌ಪೆಂಡ್ ಮಾಡಿಸಿರುತ್ತೇನೆ. ನಮ್ಮ ಆಫೀಸಿನ ಮ್ಯಾನೇಜರ್‌ಗೆ ಲೆಟರ್ ಬರೆದು ಎಕ್ಸಾಮಿನ್‌ಮಾಡಿ 15 ದಿನಸದಲ್ಲಿ ಸಸ್‌ಪೆಂಡ್ ಮಾಡಲು ನೋಟೀಸ್ ಇಷ್ಯು ಮಾಡಿಸಿರುತ್ತೇನೆ. ಇಷ್ಟೆಲ್ಲ ಆಗುವಷ್ಟರಲ್ಲಿ ಪಾರ್ಲಿಮೆಂಟ್ ಎಲೆಕ್ಷನ್ ಬಂದುಬಿಟ್ಟದ್ದರಿಂದ ಅಲ್ಲಿಗೆ ಬಿಟ್ಟದ್ದಾಯಿತು. ಪುನಃ ನಾನು ಮಂತ್ರಿಯಾದ ಮೇಲೆ ಫೈಲ್ ತರಿಸಿ ಸೆಕ್ಷನ್ 64 ರ ಪ್ರಕಾರ ಎನ್‌ಕ್ವೈರಿ ಮಾಡಿಸಿರುತ್ತೇನೆ. ಆದರೂ ನನಗೆ ಸಮಾಧಾನ ಇಲ್ಲದ್ದರಿಂದ ಅಲ್ಲಿ 12 ಲಕ್ಷ ರೂಪಾಯಿಗಳಷ್ಟೇ ಅಲ್ಲ 15-18 ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ. ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಹೋದವರ್ಷ ಸಿ. ಒ. ಡಿ. ಗೆ ರೆಫರ್ ಮಾಡಿದ್ದೇವೆ. ಸಿ. ಓ. ಡಿ. ರಿಪೋರ್ಟ್ ಇನ್ನೂ ಬಂದಿಲ್ಲ. ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುವುದಾಗುತ್ತದೆ. ಅಷ್ಟರಲ್ಲಿ ದುರುಪಯೋಗಕ್ಕೆ ಸಂಬಂಧಪಟ್ಟವರ ಮೇಲೆ ಪ್ರಾಪರ್ಟಿ ಅಟಾಚ್‌ಮೆಂಟ್ ಮಾಡಿದ್ದೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ.--ಇದರಲ್ಲಿ ನಿರಪರಾಧಿಗಳಾಗಿರತಕ್ಕಂಥವರ ಪ್ರಾಪರ್ಟಿ ಅಟಾಚ್‌ಮೆಂಟ್ ಮಾಡಿರುತ್ತಾರೆ. ಯಾರು ಸಾಲವನ್ನು ತೆಗೆದುಕೊಂಡಿರುತ್ತಾರೋ ಅವರ ಪ್ರಾಪರ್ಟಿ ಅಟಾಚ್‌ಮೆಂಟ್ ಆಗಿರುತ್ತದೆ. ನಿರಪರಾಧಿಗಳಿಗೆ ರಕ್ಷಣೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಅಂಥ ಸ್ಪೆಸಿಫಿಕ್ ಯಾವುದಾದರೂ ಇದ್ದರೆ, ಅದನ್ನು ತಿಳಿಸಿ, ಅವರನ್ನು ಒತ್ತಾಯ ಮಾಡುವುದು ಬೇಡವೆಂದು ಇನ್‌ಸ್ಟ್ರಕ್ಷನ್ ಕೊಡುತ್ತೇನೆ.

ಹುಬ್ಬಳ್ಳಿ ಧಾರವಾಡನಗರ ಸಭೆಯವರು ಕೆಡವಿದ ಗುಡಿಸಿಲುಗಳು

332(449) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).--ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಡಿಸೆಂಬರ್ 1983ರಲ್ಲಿ ಹುಬ್ಬಳ್ಳಿ ಧಾರವಾಡ ಮಹಾ ನಗರಸಭೆಯ ಅಧಿಕಾರಿಗಳು ಹುಬ್ಬಳ್ಳಿ ಹಳೆಯ ಭಾಗದ ನಗರಸಭೆಯ ಒಂದು ನಿವೇಶನದಲ್ಲಿ ಕಟ್ಟಿದ್ದ ಬಡಜನರ ಗುಡಿಸಿಲುಗಳನ್ನು ನಾಶಪಡಿಸಿದರೆ.

ಅ) ಹಾಗಾದರೆ ನಾಶಪಡಿಸಿದ ಗುಡಿಸಿಲುಗಳೆಷ್ಟು.

ಇ) ಆ ಬಡ ಜನರಿಗೆ ಬದಲಿ ನಿವೇಶನಗಳನ್ನು ಕೊಟ್ಟ ನಂತರ ಆ ರೀತಿ (ಗುಡಿಸಿಲುಗಳನ್ನು) ನಾಶಮಾಡಲಾಯಿತೆ,

ಈ) ಮಹಾ ನಗರಸಭೆ, ಸರ್ಕಾರಿ ಅಥವಾ ವಿಶ್ವಸ್ತ ಮಂಡಳಿ ಅಭಿವೃದ್ಧಿ ಮಂಡಳಿ ಭೂಮಿಗಳ ಮೇಲೆ ಕಟ್ಟಿದ ಗುಡಿಸಿಲುಗಳನ್ನು ನಾಶಪಡಿಸುವ ಬಗ್ಗೆ ಸರ್ಕಾರದ ನೀತಿ ಏನು ?

ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).--ಅ) ಅನಧಿಕೃತ ಹಾಗೂ ಅಪೂರ್ಣವಾಗಿ ಹಾಕಿದ್ದ ಗುಡಿಸಿಲುಗಳನ್ನು ತೆಗೆದುಹಾಕಿದ್ದಾರೆ.

ಆ) ಅಪೂರ್ಣಗೊಂಡ ಐದು ಗುಡಿಸಿಲುಗಳನ್ನು ತೆಗೆದುಹಾಕಿದೆ.

ಇ) ಇಲ್ಲ

ಈ) ಎಲ್ಲಾ ಅನಧಿಕೃತ ಕಟ್ಟಡಗಳನ್ನು ತೆಗೆಯಿಸಿ ಹಾಕಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.--ಮಾನ್ಯ ಸಚಿವರು ಕೊಟ್ಟ ಉತ್ತರಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಎಷ್ಟು ಗುಡಿಸಲುಗಳು ಇದ್ದುವು ಅದರಲ್ಲಿ ಅಧಿಕೃತವಾಗಿ ಇರತಕ್ಕಂಥದ್ದು ಎಷ್ಟು, ಅನಧಿಕೃತವಾಗಿ ಕಟ್ಟಿರತಕ್ಕಂಥ ಗುಡಿಸಲುಗಳು ಎಷ್ಟು ? ಈಗ ತೆಗೆದಿರತಕ್ಕಂಥ ಗುಡಿಸಲುಗಳಲ್ಲಿ ಅನಧಿಕೃತವಾಗಿ ಅಪೂರ್ವವಾಗಿರುವ ಗುಡಿಸಲುಗಳು ಎಷ್ಟು, ಮತ್ತು ಅಧಿಕೃತವಾಗಿ ಅಪೂರ್ವಗೊಂಡಿರುವ ಗುಡಿಸಲುಗಳು ಎಷ್ಟು ?

ಶ್ರೀ ಎಂ. ಚಂದ್ರಶೇಖರ್ --ಈಗ ತೆಗೆದಿರತಕ್ಕಂಥ ಗುಡಿಸಲುಗಳನ್ನು ಮಾತ್ರ ಕೊಟ್ಟಿರತಕ್ಕಂಥ ದ್ದಾಗಿರುತ್ತದೆ. ತೆಗೆಯದೆ ಇರುವುದು ಎಷ್ಟು ಎಂಬುದರ ಬಗ್ಗೆ ನೂಹಿತ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.--ಮಾಹಿತಿಯನ್ನು ತರಿಸಿಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.--ನೋಟೀಸನ್ನು ಕೊಟ್ಟಿರೆ ತರಿಸಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ --ಐದಕ್ಕಿಂತ ಹೆಚ್ಚು ಗುಡಿಸಲುಗಳನ್ನು ತೆಗೆದು ಹಾಕಿರುತ್ತಾರೋ ಅಥವಾ ಅಷ್ಟು ಮಾತ್ರವೇ ತೆಗೆದು ಹಾಕಿದ್ದಾರೋ ಎಂಬುದನ್ನು ತಿಳಿಸಬೇಕು ಏತಕ್ಕೆಂದರೆ ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿರತಕ್ಕಂಥವರು ಕಾರ್ಪೊರೇಷನ್‌ಗೆ ರೆಪ್ರಸೆಂಟ್ ಮಾಡಿ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಆದ್ದರಿಂದ ಅವರಿಗೆ ಜಾಗವನ್ನು ಬಿಟ್ಟುಕೊಡಬೇಕೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.--ಗಮನಕ್ಕೆ ಬಂದಿಲ್ಲ, ನೋಟೀಸ್ ಕೊಡಿ ತರಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈವತ್ತಿನ ದಿವಸ ಪೂರ್ತಿಯಾಗಿ ಅನಧಿಕೃತವಾಗಿ ಕಟ್ಟಿರತಕ್ಕಂಥ ದೊಡ್ಡ ದೊಡ್ಡ ಮನೆಗಳ ಮೇಲೆ ನಿಮ್ಮ ಕಣ್ಣು ಬೀಳುವುದಿಲ್ಲ, ಗುಡಿಸಲುಗಳ ಮೇಲೆ ನಿಮ್ಮ ವಕ್ರ ಕಣ್ಣು ಬಿದ್ದಿದೆ ಅದರ ಬದಲು ಇರುವ ಜಾಗದಲ್ಲಿಯೇ ಅವರನ್ನು ಖಾಯಂರಮಾಡಿ ಅನುಕೂಲ ಮಾಡುವ ಪ್ರವೃತ್ತಿಯನ್ನು ತೋರಿಸಲು ಸರ್ಕಾರದವರು ಯೋಚನೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.--ಅನಧಿಕೃತವಾಗಿ ಸರ್ಕಾರಿ ಜಾಗದಲ್ಲಿಯಾಗಲಿ, ಪುರಸಭೆಗಳ ಜಾಗದಲ್ಲಿಯಾಗಲಿ, ಟ್ರಸ್ಟ್‌ಬೋರ್ಡ್ ಜಾಗದಲ್ಲಿ ಅಥವಾ ನಗರಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಕೊಳಚೆ ಪ್ರದೇಶವೆಂದು ಘೋಷಣೆ ಮಾಡಿದ ಮೇಲೆ ಕೆಲವಾರ್ಡು ನಿಯಮುಗಳು ಇರುತ್ತವೆ. ಆ ನಿಯಮುಗಳಿಗೆ ಅನುಗುಣವಾಗಿ ಇದ್ದರೆ ಅದಕ್ಕೆ ಏನು ಅನುಕೂಲತೆಗಳನ್ನು ಕಲ್ಪಿಸಬೇಕೋ ಅದನ್ನು ಕಲ್ಪಿಸಿಕೊಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಅಧ್ಯಕ್ಷರು.--ಲಿಖಿತ ಮೂಲಕ ಉತ್ತರಿಸತಕ್ಕಂಥ ಪ್ರಶ್ನೆಗಳು.

ಶ್ರೀ ಎ. ಲಕ್ಷ್ಮಿಸಾಗರ್.--ಲಿಖಿತ ಮೂಲಕ ಉತ್ತರಿಸತಕ್ಕಂಥವನ್ನು ಸಭೆಯ ಮುಂದೆ ಇಡಬಯಸುತ್ತೇವೆ.

ಸಹಕಾರ ಸಂಸ್ಥೆಗಳಲ್ಲಿನ ಹಣ ದುರುಪಯೋಗದ ವಿಚಾರ.

270 (91) ಶ್ರೀ. ಬಿ. ಭೈರಪ್ಪಾಜಿ (ತುರುವೇಕೆರೆ) ಮಾನ್ಯ ಸಹಕಾರ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?.